ಮಹಾವೀರ ಕಾಸರ, ಶಿವಮೊಗ್ಗ
ಅಂಕಲ್, ಪ್ಯಾಕೇಜ್ ಹಿಂದೆ ಓಡುವುದೇ ಜೀವನವೇ?



ಹಾಗೇನಿಲ್ಲ. ವೀಕೆಂಡ್‌ನಲ್ಲಿ ಬ್ಯಾಗೇಜ್ ಹಿಡಿದೋಡುವುದೂ ಇರುತ್ತದೆ.

ಮಲ್ಲಿಕಾರ್ಜುನ, ಸುರಧೇನುಪುರ
ಮಹಾಪುರುಷರ ಕೆಲಸಕಾರ್ಯಗಳನ್ನು ಮುಂದುವರಿಸುವ ಬದಲು ಅವರ ಪ್ರತಿಮೆಗಳನ್ನು ಮಾಡುತ್ತಿರುವರಲ್ಲ?
ಪ್ರತಿಮೆಯನ್ನು ನಿಲ್ಲಿಸುವಂತೆಯೇ ಅವರ ಎಲ್ಲ ಆಶಯಗಳನ್ನು ನಿಲ್ಲಿಸುತ್ತೇವೆಂದು ಸೂಚಿಸಲಂತೆ.

ಪಿ. ಜಯವಂತ ಪೈ, ಕುಂದಾಪುರ
ಶಿಲಾಯುಗಕ್ಕೂ, ಕಲಿಯುಗಕ್ಕೂ ವ್ಯತ್ಯಾಸವೇನು?
ಆಗ ಮನುಷ್ಯ ಕಲ್ಲಿನಲ್ಲಿ (ಗುಹೆಯಲ್ಲಿ) ತೂರುತ್ತಿದ್ದ. ಈಗ ಕಲ್ಲು ತೂರುತ್ತಾನೆ.

ಅಮರಯ್ಯಾ ಪತ್ರಿಮಠ, ಶೋರಾಪುರ
ಹೆಣ್ಣು ನಗುತ್ತಿದ್ದರೆ ಚೆಂದ. ಗಂಡು ದುಡಿಯುತ್ತಿದ್ದರೆ ಚೆಂದ. ಬ್ರಹ್ಮಚಾರಿ?



ನಗುವ ಹೆಣ್ಣಿಗೆ ಲೈನ್ ಹೊಡೆಯುತ್ತಾ ದುಡಿಯುವ ದಾರಿ ಹುಡುಕುವುದೇ ಅಂದ.

ಹೆಚ್.ವಿ. ಶ್ರೀಧರ್, ಬೆಂಗಳೂರು
ಸಮಾರಂಭಗಳಲ್ಲಿ ಅಡುಗೆಯವರು ಬಡಿಸುವಾಗ 'ಸಾರ್‌ಗನ್ನ' ಎನ್ನುತ್ತಾರೆ; 'ಮೇಡಮ್‌ಗನ್ನ' ಎನ್ನರೇಕೆ?
ಮಿಸ್, ಮಿಸೆಸ್, ಮೇಡಂ, ಆಂಟಿ, ಸ್ವೀಟಿಗಳಲ್ಲಿ ಯಾವುದನ್ನು ಬಳಸಬೇಕೆಂಬ ಗೊಂದಲವಂತೆ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
ಕಾಲಜ್ಞಾನವನ್ನು ರಾಜಕೀಯ ನಾಯಕರು ಬರೆದರೆ ಹೇಗಿರುತ್ತೆ?
ಟೈಟಲನ್ನು ಮುಕ್ಕಾಲಜ್ಞಾನ (ಮುಕ್ಕಾಲು ಅಜ್ಞಾನ) ಎಂದು ಬದಲಿಸಿ.

ಮಹಾವೀರ ಕಾಸರ, ಶಿವಮೊಗ್ಗ
ತಪಸ್ಸು ಮಾಡಬೇಕೆಂದಿದ್ದೇನೆ. ಪ್ರಶಸ್ತ ಸ್ಥಳ ಯಾವುದು?
ಹೊರಗಣ್ಣನ್ನು ಮುಚ್ಚಿ, ಒಳಗಣ್ಣನ್ನು ತೆರೆದರೆ ಸಿಟಿ ಮಾರ್ಕೆಟ್ಟೂ ಆದೀತು.

ಜಗದೀಶ ಬಿ ಹೊಸೂರು, ಮೈಸೂರು
ಕೆಲವು ಮಹಿಳೆಯರು ಎಷ್ಟೇ ಮನವೊಲಿಸಲೆತ್ನಿಸಿದರೂ ಸ್ಕೂಟರ್ ಚಾಲನೆ ಕಲಿಯುವುದಿಲ್ಲ. ಏಕೆ?
ಕಲಿತು ಹೆಚ್ಚಿನ ಕೆಲಸ ಹೊರುವುದಕ್ಕಿಂತ ಕಲಿಯದಿರುವುದೇ ಜಾಣತನವೆಂದು.

ಶಿವಮೊಗ್ಗ ರಮೇಶ್, ಮೈಸೂರು
ನೀವು ಬಿಗ್ ಬಾಸ್ ರಿಯಾಲಿಟಿ ಶೋಗೆ ಏಕೆ ಹೋಗಿಲ್ಲ ಸಾರ್?
ಮೃಗಾಲಯದ ಪ್ರಾಣಿಯಂತೆ ಕುಳಿತು ರಿಂಗ್ ಮಾಸ್ಟರ್‌ನ ಅಣತಿಯಂತಾಡಲು ಇಷ್ಟವಿಲ್ಲ.

ಅಂಚೆ ಸುಬ್ರಹ್ಮಣ್ಯ, ಕೊಪ್ಪ
ಹೆಂಡತಿಯನ್ನ ಅರ್ಧಾಂಗಿ ಅಂತ ಹೇಳೋದೇಕೆ?
ಆಗ ಪತಿಯ ಶರ್ಟಿನ ಅರ್ಧದಷ್ಟು ಬಟ್ಟೆ ಬ್ಲೌಸಿಗೆ ಬೇಕಿತ್ತು. ಈಗ ಕಾಲಂಗಿ ಅನ್ನಬಹುದೇನೋ!

ದೇವೇಂದ್ರ, ಕಡೂರು
ಆಯಸ್ಸನ್ನು ಖರೀದಿ ಮಾಡುವ ಅವಕಾಶ ಇದ್ದಿದ್ದರೆ?
ಕೃಷ್ಣನ ಮಾತು 'ಜಾತಸ್ಯ ಆಯುಷ್ಯ ಕ್ರಯಣ ಧೃವಂ' ಎಂದು ಬದಲಾಗುತ್ತಿತ್ತು.

ವಿಜಯಕುಮಾರ್ ಎಚ್.ಕೆ. ರಾಯಚೂರು
ತಾಯಿ ಮಗುವಿಗೆ ಮೊಲೆಹಾಲೀವ ಪವಿತ್ರ ಫೋಟೊ ನಮ್ಮ ದೇಶದ ರೂಪಾಯಿ, ನೋಟು, ಸ್ಟ್ಯಾಂಪುಗಳಲ್ಲೇಕಿಲ್ಲ?
ಈಗಲೂ ತಾಯಂದಿರು ಮೊಲೆಯೂಡುವರಲ್ಲ; ನೋಟಿನಲ್ಲಿ ಗತವೈಭವವಷ್ಟೇ ಪ್ರಸ್ತುತ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಸರ್ಕಾರದ ಕೆಲಸ ದೇವರ ಕೆಲಸ. ಸರ್ಕಾರದ ಹಣ?
ಶೇ.60 ಗಣಗಳಿಗೆ; ಶೇ.40 ಹೆಗ್ಗಣಗಳಿಗೆ.

## ವಾರದ ಪ್ರಶ್ನೆ

ದಿನೇಶ್, ಗುಡ್ಡದೂರು
ದೇವಲೋಕದ ಇಂದ್ರ–ಚಂದ್ರರು ನಿಮಗೆ ಪ್ರಶ್ನೆ ಕೇಳಿದರೆ ಉತ್ತರಿಸುವಿರಾ ರಾಮ್?
ಸುಶಿಕ್ಷಿತರಾದ ನಿಮ್ಮೆಲ್ಲರ ಪ್ರಶ್ನೆಗಳಿಗೇ ಉತ್ತರಿಸುವಾಗ ಅದು ಮಕ್ಕಳಾಟವಾಗುತ್ತದೆ ಬಿಡಿ.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ
ಜಯದ ಮೊದಲ ಗುಟ್ಟು ಯಾವುದು?
ಎದುರಾಳಿಯ ದೌರ್ಬಲ್ಯ.

ಬಿ.ಆರ್. ಉಷಾ, ಕೆನಡ
ಅಳಿಯ ಮನೆ ತೊಳೆಯ. ಸೊಸೆ?
ಮನೆ ಬೆಳೆಯ!

ಬಾ.ರಂ. ಸುರೇಶ್, ಶಿವಮೊಗ್ಗ
ದೇವರನ್ನು ಎಷ್ಟು ಬೇಡಿಕೊಂಡರೂ ಕಷ್ಟ ಪರಿಹಾರವಾಗುತ್ತಿಲ್ಲ. ಬೇರೆ ಯಾರನ್ನು ಬೇಡಿಕೊಳ್ಳಲಿ?



ಕಷ್ಟಕ್ಕೆ ಕಾರಣರಾದವರನ್ನು – ಫಾರ್ ಎಕ್ಸಾಂಪಲ್ ಸಂಗಾತಿಯನ್ನಿತ್ತ ಅತ್ತೆಮಾವ!

ಕೆ. ಹೊನ್ನಪ್ಪ, ಕ್ಯಾತ್ಸಂದ್ರ
ತುತ್ತುತುತ್ತಿನ ಹಿಂದೆ ಅಪಾರ ಶ್ರಮವಿರುವಾಗ ದೃಶ್ಯಗಳಲ್ಲಿ ಅನ್ನದತಟ್ಟೆಯಲ್ಲಿ ಕೈತೊಳೆವುದನ್ನು ತೋರಿಸುವುದು ಸರಿಯೆ?
ಊಹೂಂ ಮುಂದಿನ ದೃಶ್ಯಗಳಲ್ಲಿ ಅನ್ನಬಡಿಸುವುದಕ್ಕೆ ಮೊದಲೇ ಜಗಳವಾಗಬೇಕೆಂದು ಬೇಡಿಕೆ ಸಲ್ಲಿಸೋಣ.

ಸೂರ್ಯಪ್ರಕಾಶ್ ಸಿ.ಎಸ್. ಬೆಂಗಳೂರು
ನಿಮ್ಮಲ್ಲೂ ಪ್ರಶ್ನೆಗೆ ಉತ್ತರ ಬೇಕಿದ್ದರೆ ಮೀಸಲಾತಿ ಪದ್ಧತಿ ಅನುಸರಿಸುವಂತೆ ಕಾಣುತ್ತಿದೆಯಲ್ಲ?
ನಿಜ. ಯೋಗ್ಯವಾದ, ರಿಪೀಟ್ ಆಗಿರದ ಪ್ರಶ್ನೆಗಳಿಗೆ ಇಲ್ಲಿ ಶೇ.100 ಮೀಸಲಾತಿ ಇದೆ.

■ ರಾಮ್